**ಪಿಡಬ್ಲೂ.1**

ಇಂದು ದಿನಾಂಕ 29.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:-**

ನಾನು ಬಿ.ಇ.ಓ ಕಛೇರಿಯಲ್ಲಿ ಪ್ರ.ದ.ಸ ಎಂದು ಕೆಲಸ ಮಾಡುತ್ತೇನೆ. ಮಹಜರನ್ನು ಪೋಲೀಸರು ಬರೆದಿದ್ದಾರೆ. ಮಹಜರನಲ್ಲಿ ಬರೆದಿರುವ ವಿಷಯಗಳು ಚಾಸಾ-4 ರವರು ಹೇಳಿ ಬರೆಸಿದ್ದಾರೆ. ನಾನು ಹೇಳಿ ಬರೆಸಿಲ್ಲ. ಮಹಜರನಲ್ಲಿ ಬಿ.ಇಓ ಕಛೇರಿ ಎಲ್ಲಿದೆ, ಬಿ.ಇ.ಓ ಕೋಣೆ ಎಲ್ಲಿದೆ ಮತ್ತು ಆರೋಪಿ ಅದೇ ಸ್ಥಳದಲ್ಲಿ ಕೂತು ಅಕ್ರಮವಾಗಿ ಹಣ ವರ್ಗಾಯಿಸಿದ ಬಗ್ಗೆ ಬರೆದಿದ್ದಾರೆ. ಮಹಜರನಲ್ಲಿ ಬರೆದಂತಹ ವಿಷಯಗಳು ನನಗೆ ಗೊತ್ತಿಲ್ಲ, ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.

ಸಾಕ್ಷಿಯ ಸಹಿ

**ಪಿಡಬ್ಲೂ.2**

ಇಂದು ದಿನಾಂಕ 29.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:-**

ಮಹಜರನ್ನು ಪೋಲೀಸರು ಬರೆದಿದ್ದಾರೆ. ಮಹಜರನಲ್ಲಿ ಬರೆದಿರುವ ವಿಷಯಗಳು ಚಾಸಾ-4 ರವರು ಹೇಳಿ ಬರೆಸಿದ್ದಾರೆ. ಮಹಜರನಲ್ಲಿ ಚಕಬಂದಿಯನ್ನು ಬರೆದಿದ್ದಾರೆ. ಮಹಜರನಲ್ಲಿ ಬರೆದಂತಹ ವಿಷಯಗಳು ನನಗೆ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.

ಸಾಕ್ಷಿಯ ಸಹಿ

| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ | |
|---|---|
| | ಸಿ.ಸಿ.ನಂ. – 1/2021 |
| | ಚಾ.ಸಾ – 8 |
| | ಪ್ರಾ.ಸಾ – 5 |
| ಸಾಕ್ಷಿದಾರರ ಹೆಸರು | ಶೆಟ್ಟೆಪ್ಪ ಮಾದರ |
| ತಂದೆ/ಗಂಡ ಹೆಸರು | ಯಲ್ಲಪ್ಪ |
| ವಯಸ್ಸು | 55 ವರ್ಷ |
| ಉದ್ಯೋಗ | ಶಿಕ್ಷಕ |
| ವಾಸಸ್ಥಳ | ಮರೆಗುದ್ದಿ, ಗ್ರಾಮ |

ಇಂದು ದಿನಾಂಕ 29.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಸ.ಸ.ಅ ರವರಿಂದ:–**

ದಿನಾಂಕ 12.01.2018 ರಂದು ನನ್ನ ಖಾತೆ ನಂ.30343134827 ಗೆ ಸಂಬಂಧಿಸಿದಂತೆ ರೂ.20,000–00 ಗಳನ್ನು ಖಾತೆಗೆ ಹಾಕಿದ್ದರು. ಆರೋಪಿ ನನಗೆ ಫೋನ್ ಮಾಡಿ ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲ, ನನ್ನ ತಮ್ಮ ಮುಂಬೈಯಲ್ಲಿ ಖಾಸಗೀ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಸದರಿಯವರು ನನ್ನ ಖಾತೆಗೆ ಹಣ ಹಾಕುತ್ತಾರೆ ಎಂದು ತಿಳಿಸಿದ್ದರು. ನನ್ನ ಖಾತೆಗೆ ರೂ.20,000–00 ಹಣ ಬಂದ ನಂತರ ಆರೋಪಿಗೆ ಹಣವನ್ನು ತೆಗೆದು ಕೊಟ್ಟಿದ್ದೇನೆ. ಒಟ್ಟು 12 ಜನಕ್ಕೆ ಈ ರೀತಿ ಆಗಿತ್ತು. ಸದರಿಯವರ ಹೆಸರು ನನಗೆ ಹೇಳಲು ಬರುವುದಿಲ್ಲ. ಇಷ್ಟನ್ನು ಬಿಟ್ಟು ನನಗೆ ಬೇರೇನೂ ಗೊತ್ತಿಲ್ಲ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

**ಪಾಟೀ ಸವಾಲು : ಸ.ಸ.ಅ ರವರಿಂದ:–**

ಆರೋಪಿ ಇದೇ ರೀತಿ ನಮ್ಮ ಶಿಕ್ಷಕರ ಬ್ಯಾಂಕು ಖಾತೆಗೆ ಹಣ ಜಮಾ ಮಾಡಿದ ವಿಷಯ ನಮ್ಮ ತಾಲೂಕಿನ ಎಲ್ಲ ಶಿಕ್ಷಕರು ಮಾತನಾಡುತ್ತಿದ್ದರು ಎಂದರೆ ಸರಿ. ಈ ಬಗ್ಗೆ ನಾವೆಲ್ಲಾ ಚಾಸಾ–5, ಚಾಸಾ–6, ಚಾಸಾ–7, ಚಾಸಾ–9 ರಿಂದ ಚಾಸಾ–15 ಬಿ.ಇ.ಓ ಕಛೇರಿಗೆ ಹೋಗಿದ್ದೆವು ಎಂದರೆ ಸರಿ. ಆಗ ಚಾಸಾ–4 ಮತ್ತು ಬಿ.ಸಿ. ಮಠ ಇವರು ದಾಖಲಾತಿಗಳನ್ನು ಪರಿಶೀಲನೆ ಮಾಡಲು ಬಿ.ಇ.ಓ ರವರು ತಿಳಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಯಾವುದೇ ಶಿಕ್ಷಕರು ಗಳಿಕೆ ರಜೆ ಅರ್ಜಿಯನ್ನು ಕೊಡದೇ ಇದ್ದರೂ ಸಹ

ಶಿಕ್ಷಕರ ಗಳಿಕೆ ರಜೆಯ 2ನೇ ಬಿಲ್ಲು ಮತ್ತು ಅರಿಯರ್ಸ ಬಿಲ್ಲನ್ನು ತಯಾರಿಸಿ ಹೆಚ್.ಆರ್.ಎಮ್.ಎಸ್. ತಂತ್ರಾಂಶದಲ್ಲಿ ನೊಂದಣಿ ಮಾಡಿ ಸರಕಾರಿ ಟೋಕನ್ ನಂ.416/17-18 ನೇದ್ದನ್ನು ಬಳಸಿ ಅಪ್ರುವಲ್ ಮಾಡಿ ಸರಕಾರಿ ಟೋಕನ್ ನಂ.260/17-18 ನ್ನು ಬಳಸಿ ಶಾಖಾಧಿಕಾರಿಗಳ ಸಹಿಯನ್ನು ಪಡೆಯದೇ ಅನುದಾನಿತ ಪೂರ್ಣ ಬಿಲ್ಲನ್ನು ಸೃಷ್ಟಿ ಮಾಡಿ ಜಮಖಂಡಿ ಉಪಖಜಾನೆಗೆ ದಿನಾಂಕ 28.12.2017 ಮತ್ತು 15.09.2017 ರಂದು ಕೊಟ್ಟು ಚೆಕ್‌ನ್ನು ಪಡೆದು ನನ್ನ ಬ್ಯಾಂಕ್ ಖಾತೆಗೆ ಹಾಕಿದ್ದರು ಎಂದರೆ ಸರಿ. ಇನ್ನುಳಿದವರ ಖಾತೆಗೂ ಸಹ ಹಣವನ್ನು ಹಾಕಿದ್ದರು ಎಂದರೆ ಸರಿಯಲ್ಲ. ಚಾಸಾ-1 ಇವರು ಆರೋಪಿತನ ವಿರುದ್ಧ ದೂರನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆರೋಪಿ ಸೃಷ್ಟಿಸಿದ ದಾಖಲಾತಿಗಳನ್ನು ನಾವು ಮತ್ತು ಚಾಸಾ-1 ರವರು ಕೂಡಿ ಸಹಿಗಳನ್ನು ಪರಿಶೀಲನೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ-1 ತಮ್ಮ ಸಹಿಗಳೇ ಇರಬಹುದು ಎಂದು ಹೇಳಿದರು ಎಂದರೆ ಸರಿಯಲ್ಲ. ಆರೋಪಿ ಈತ ಚಾಸಾ-1 ಕೆಲಸದ ಒತ್ತಡದಲ್ಲಿ ಇರುವಾಗ ಅವರಿಗೆ ಮೋಸ ಮಾಡಿ ಸಹಿ ಪಡೆದುಕೊಂಡು ದುರುಪಯೋಗ ಪಡಿಸಿಕೊಂಡು ವಂಚನೆ ಮಾಡಿದ ಬಗ್ಗೆ ಗೊತ್ತಾಯಿತು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಬಿ.ಇ.ಓ ಕಛೇರಿಯಲ್ಲಿ ಬಟವಾಡೆ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಶಿಕ್ಷಕರಿಂದ ಅರ್ಜಿಗಳನ್ನು ಪಡೆಯದೇ ಆರೋಪಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ತನ್ನ ಖಾತೆಗೆ ರೂ.58,877-00 ಗಳು ಹಾಗೂ ಇನ್ನುಳಿದ ಶಿಕ್ಷಕರ ಖಾತೆಗೆ ರೂ.2,52,241-00 ಗಳ ಹಣವನ್ನು ಜಮಾ ಮಾಡಿದ್ದ ಎಂದರೆ ಸರಿ. ಆರೋಪಿ ಸರಕಾರಕ್ಕೆ ನಂಬಿಕೆ ದ್ರೋಹ ಹಾಗೂ ಮೋಸ ಮಾಡಿ ರೂ.3,11,118-00 ಗಳನ್ನು ದುರ್ಬಳಕೆ ಮಾಡಿಕೊಂಡಿದ್ದ ಎಂದರೆ ಸರಿ. ಆರ್. ಬಿ. ತಹಶೀಲ್ದಾರ --------- ಬಿ.ಇ.ಓ ರವರಿಗೆ ತಿಳಿಸಿದರು ಮತ್ತು ಸದರಿ ಸುಭಾಸಚಂದ್ರ ------- ಗೊತ್ತಾಗಿದೆ ಎಂದು ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:-** ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಯಾವುದೇ ಸಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.

ಸಾಕ್ಷಿಯ ಸಹಿ

| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ | |
|---|---|
| | ಸಿ.ಸಿ.ನಂ. – 1/2021 |
| | ಚಾ.ಸಾ – 9 |
| | ಪ್ರಾ.ಸಾ – 6 |
| ಸಾಕ್ಷಿದಾರರ ಹೆಸರು | ನಾಗಪ್ಪ ಮಾಲಗಾರ |
| ತಂದೆ/ಗಂಡ ಹೆಸರು | ಭೀಮಣ್ಣ |
| ವಯಸ್ಸು | 45 ವರ್ಷ |
| ಉದ್ಯೋಗ | ಸಿ.ಆರ್.ಪಿ. ಕುಂಚನೂರ |
| ವಾಸಸ್ಥಳ | ಹುನ್ನೂರ. |

ಇಂದು ದಿನಾಂಕ 29.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಸ.ಸ.ಅ ರವರಿಂದ:–**

ದಿನಾಂಕ 12.01.2018 ರಂದು ನನ್ನ ಖಾತೆ ನಂ.11127278698 ಗೆ ಸಂಬಂಧಿಸಿದಂತೆ ರೂ.25,000–00 ಗಳನ್ನು ಖಾತೆಗೆ ಜಮಾ ಆಗಿದೆ. ಮಾರನೇ ದಿನ ಆರೋಪಿ ನನಗೆ ಫೋನ್ ಮಾಡಿ ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲ, ನನ್ನ ಹಣ ತಪ್ಪಿ ನಿಮ್ಮ ಖಾತೆಗೆ ಜಮಾ ಆಗಿದೆ, ನನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಗಿದೆ, ಹಣ ತೆಗೆದುಕೊಡಿ ಎಂದು ಕೇಳಿದ್ದಾರೆ. ನಾನು ಹಣವನ್ನು ತೆಗೆದುಕೊಟ್ಟಿದ್ದೇನೆ. ಈ ವಿಷಯ ನಮ್ಮ ತಾಲೂಕಿನ ತುಂಬಾ ಹರಡಿದೆ. ಈ ರೀತಿ 11 ಜನ ಶಿಕ್ಷಕರಿಗೆ ಹಣ ಜಮಾ ಆಗಿದೆ ಎಂದು ಗೊತ್ತಾಗಿದೆ. ನಂತರ ನಾವೆಲ್ಲರೂ ಚಾಸಾ–1 ಇವರನ್ನು ಭೇಟ್ಟಿಯಾಗಿದ್ದೇವೆ ಮತ್ತು ನಡೆದ ವಿಷಯವನ್ನು ಚಾಸಾ–1 ಇವರಿಗೆ ಹೇಳಿದ್ದೇವೆ. ಚಾಸಾ–1 ಇವರು ಚಾಸಾ–4 ಮತ್ತು ಬಿ.ಸಿ.ಮಠ ಇವರಿಗೆ ಪರಿಶೀಲನೆ ಮಾಡಲು ತಿಳಿಸಿದ್ದಾರೆ. ಸದರಿಯವರು ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದಾರೆ. ಆರೋಪಿ ಯಾವುದೇ ಶಿಕ್ಷಕರಿಂದ ಗಳಿಕೆ ರಜೆಯ ನಗದೀಕರಣಕ್ಕಾಗಿ ಅರ್ಜಿಯನ್ನು ಪಡೆಯದೇ ಮತ್ತು ಬಾಕಿ ಹಣ ಬಿಲ್ಲನ್ನು ಹೆಚ್.ಆರ್.ಎಮ್.ಎಸ್. ತಂತ್ರಾಂಶದಲ್ಲಿ ಲೆಕ್ಕ ಹಾಕಿ ಜನರೇಟ್ ಮಾಡಿ, ಜಮಖಂಡಿ ಟ್ರಸರಿ ಕಛೇರಿಗೆ ಕಳುಹಿಸಿಕೊಟ್ಟಿದ್ದಾರೆ.

ಚಾಸಾ–1 ರವರ ಸಹಿಯನ್ನು ನಮಗೆ ತೋರಿಸಿದ್ದಾರೆ. ಚಾಸಾ–1 ರವರೂ ಸಹ ಸಹಿ ನನ್ನದೇ ಎಂದು ಹೇಳಿದ್ದಾರೆ. ಚಾಸಾ–1 ರವರು ಕೆಲಸದ ಒತ್ತಡದಲ್ಲಿದ್ದಾಗ ಆರೋಪಿ ಅವರ ಸಹಿಯನ್ನು ತೆಗೆದುಕೊಂಡಿದ್ದಾಗಿ ಗೊತ್ತಾಗಿದೆ. ಗಳಿಕೆ ರಜೆಯ ರೂ.58,887–00 ಗಳು

ಮತ್ತು ರೂ.2,88,000-00 ಚಿಲ್ಲರೆ ಹಣವನ್ನು ಶಿಕ್ಷಕರ ಖಾತೆಗೆ ಜಮೆ ಮಾಡಿದ್ದಾರೆ. ಸದರಿ ಹಣವನ್ನು ಆರೋಪಿ ತೆಗೆದುಕೊಂಡು ಸರಕಾರಕ್ಕೆ ದ್ರೋಹ ಮಾಡಿದ್ದಾರೆ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತನು ಈ ರೀತಿ ದುರುಪಯೋಗ ಪಡಿಸಿಕೊಂಡಿದ್ದಾರೆ.

**ಪಾಟೀ ಸವಾಲು:- ಆರೋಪಿತರ ಪರ ವಕೀಲರಿಂದ:-**

ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಯಾವುದೇ ಸಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.

ಸಾಕ್ಷಿಯ ಸಹಿ